# ಸಚಿನ್ ಎಂದರೆ ಒಗೇಲ್‌ಗೆ ಬಲು ಪ್ರೀತಿ



ಪಂಚ ಪಾಂಡವರ ರೀತಿಯಲ್ಲಿ ಆ ಐವರು ಆತ್ಮೀಯ ಸ್ನೇಹಿತರು. ದೇಶ, ಮೈಬಣ್ಣ ಬೇರೆಯಾದರೂ ಅವರ ಮಧುರ ಸ್ನೇಹಕ್ಕೆ ಇವು ಅಡ್ಡಿ ಬಂದಿರಲಿಲ್ಲ. ಪ್ರವಾಸ ಮಾಡುವುದೆಂದರೆ ಅವರಿಗೆ ಬಲುಪ್ರೀತಿ. ತರಗತಿಗೆ ರಜೆ ಸಿಕ್ಕರೆ ಸಾಕು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುವುದು ಅವರ ಅಭ್ಯಾಸ. ಕೇರಳದಲ್ಲಿ ಉಂಟಾಗಿದ್ದ ಪ್ರವಾಹದಿಂದಾಗಿ ಅಲ್ಲಿನ ಪ್ರವಾಸೋದ್ಯಮ ಚೇತರಿಕೆಯ ಹಾದಿಯಲ್ಲಿ ಸಾಗುತ್ತಿದೆ. ಈ ಬಾರಿ ಅವರ ಆಯ್ಕೆ ಅರಮನೆ ನಗರಿ ಮೈಸೂರು ಆಗಿತ್ತು.

ಕೇರಳದ ಕೊಟ್ಟಾಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದಲ್ಲಿ ಇಂಟರ್ ನ್ಯಾಷನಲ್ ರ್‍ಲೇಷನ್ಸ್ ಅಂಡ್ ಪಾಲಿಟಿಕ್ಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ ಫ್ರಾನ್ಸ್‌ನ ಒಗೇಲ್, ಎಲೋಸ್, ಕೀನ್ಯಾದ ಅಲೆಕ್ಸ್, ಜಾಂಬಿಯಾದ ಹಡ್ಸನ್ ಹಾಗೂ ಮತ್ತೊಬ್ಬರು ಮೈಸೂರಿನ ಅಂಬಾ ವಿಲಾಸ ಅರಮನೆಯ ಸೊಬಗಿಗೆ ಮಾರುಹೋಗಿದ್ದರು. ಆದರೆ, ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಒಗೇಲ್ ಹೊರತುಪಡಿಸಿ ಉಳಿದವರು ಇಚ್ಛಿಸಲಿಲ್ಲ. ಮತ್ತೊಬ್ಬರಂತೂ ಚಿತ್ರ ತೆಗೆಸಿಕೊಳ್ಳಲೂ ಬಯಸಲಿಲ್ಲ.

ಆದರೆ, ಉತ್ಸಾಹದ ಬುಗ್ಗೆಯಂತಿದ್ದ ಒಗೇಲ್ ತಮ್ಮ ಅನುಭವಗಳನ್ನು ಮುಕ್ತವಾಗಿ ಹಂಚಿಕೊಂಡರು. 'ಆಧುನಿಕತೆ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸುತ್ತಿರುವ ಫ್ರಾನ್ಸ್ ಅಂತಹ ರಾಷ್ಟ್ರದ ಪ್ರಜೆ ಒಗೇಲ್ ಅವರನ್ನು ಭಾರತ ಸೆಳೆದಿದೆ. ಭಾರತ ಹಾಗೂ ಫ್ರಾನ್ಸ್ ನಡುವೆ ಅವಿನಾಭಾವ ಸಂಬಂಧವಿದೆ. ಫ್ರೆಂಚರು ಭಾರತದಲ್ಲಿ ತಮ್ಮ ವಸಾಹತು ಸ್ಥಾಪಿಸಿದ್ದರು. ಆಗ ಫ್ರಾನ್ಸ್‌ನ ಎಷ್ಟೋ ಮಂದಿ ಇಲ್ಲೇ ನೆಲೆಸಿ ಮಣ್ಣಾಗಿದ್ದಾರೆ. ಬಹುಶಃ ಈ ಕಾರಣಕ್ಕೋ ಏನೋ ನನಗೆ ಭಾರತ ಕಂಡರೆ ಚಿಕ್ಕಂದಿನಿಂದಲೂ ಒಂದು ರೀತಿಯ ಸೆಳೆತ, ಪ್ರೀತಿ. ಹೀಗಾಗಿ, ನನ್ನ ಸ್ನಾತಕೋತ್ತರ ಪದವಿಯ ಅಧ್ಯಯನಕ್ಕಾಗಿ ಭಾರತವನ್ನೇ ಆಯ್ಕೆ ಮಾಡಿಕೊಂಡೆ. ಇದಕ್ಕಾಗಿ ನನ್ನಲ್ಲಿ ಹೆಮ್ಮೆ ಇದೆ' ಎಂದು ಬೀಗಿದರು.

'ಯಾವುದೇ ಸಂಸ್ಕೃತಿ ಅಥವಾ ವ್ಯಕ್ತಿಗೆ ಘನತೆ ಬರುವುದು ಅವರು ಮತ್ತೊಬ್ಬರಿಗೆ ನೀಡುವ ಗೌರವದಿಂದ. ಅಂತಹ ಗೌರವ ನನಗೆ ಇಲ್ಲಿ ಸಿಕ್ಕಿದೆ. ಮತ್ತೊಬ್ಬರೊಂದಿಗೆ ಬೆರೆಯುವ, ಪ್ರೀತಿ ವಿಶ್ವಾಸದಿಂದ ಕಾಣುವ ಹಾಗೂ ವಿವಿಧ ಸಂಸ್ಕೃತಿಗಳ ನಡುವೆಯೂ ಜನರು ಸಹಬಾಳ್ವೆಯಿಂದ ಬದುಕು ನಡೆಸುತ್ತಿರುವುದು ನನ್ನಲ್ಲಿ ಅಚ್ಚರಿ ಉಂಟು ಮಾಡುತ್ತದೆ' ಎಂದು ಹೇಳಿದರು.

ಸಮಯ ಸಿಕ್ಕಾಗಲೆಲ್ಲಾ ಸ್ನೇಹಿತರೊಟ್ಟಿಗೆ ಕ್ರಿಕೆಟ್ ಆಡುವ ಒಗೇಲ್‌ಗೆ ಭಾರತದ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರನ್ನು ಕಂಡರೆ ವಿಶೇಷ ಪ್ರೀತಿ. ಅವರ ಆಟದ ಶೈಲಿಗೆ ಮಾರುಹೋಗಿದ್ದಾರಂತೆ. 'ತೆಂಡೂಲ್ಕರ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರೂ, ಅವರು ಆಡಿರುವ ಕ್ರಿಕೆಟ್ ಪಂದ್ಯಾವಳಿಗಳ ಹಳೆಯ ವಿಡಿಯೊಗಳನ್ನು ನೋಡುತ್ತಾ ಖುಷಿ ಪಡುತ್ತೇನೆ' ಎಂದು ಅಭಿಮಾನ ತೋರಿದರು.

ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನಲ್ಲಿ ದಿನಕ್ಕೊಂದು ಫ್ಯಾಷನ್, ವೈವಿಧ್ಯಮಯ ಉಡುಪುಗಳು ತಯಾರಾದರೂ, ಅವುಗಳ ಮೇಲೆ ಅಂತಹ ವ್ಯಾಮೋಹವಿಲ್ಲ ಎನ್ನುವ ಒಗೇಲ್ ಅವರಿಗೆ ಭಾರತೀಯ ಸಾಂಪ್ರದಾಯಿಕ ಉಡುಗೆಗಳು ಮನ ಕದ್ದಿವೆಯಂತೆ.

'ಭಾರತೀಯ ಮಹಿಳೆಯರು ಸೀರೆಯಲ್ಲಿ ಅಂದವಾಗಿ ಕಾಣುತ್ತಾರೆ. ನಾನೂ ಸಹ ಸ್ನೇಹಿತೆಯರ ಸಹಾಯ ಪಡೆದು ಸೀರೆ ಉಟ್ಟಿದ್ದೆ. ಅದೊಂದು ಅದ್ಭುತ ಅನುಭವ' ಎಂದು ಪುಳಕಿತರಾದರು.

ಮೈಸೂರಿನ ಕೆ.ಆರ್.ಮಾರುಕಟ್ಟೆಯ ಗಲ್ಲಿಗಳನ್ನೂ ಸುತ್ತಾಡಿ ಬಂದ ಒಗೇಲ್ ತಂಡವು ವಿವಿಧ ವಸ್ತುಗಳ ಖರೀದಿ ಮಾಡಿದ್ದಾರೆ. ಚಾಮುಂಡಿ ಬೆಟ್ಟಕ್ಕೆ ಹೋಗಿ ಅಲ್ಲಿನ ಮಹಿಷಾಸುರನ ಪ್ರತಿಮೆ ಎದುರು ಸೆಲ್ಫೀ ತೆಗೆಸಿಕೊಂಡು ಸಂಭ್ರಮಿಸಿದರಂತೆ. 'ಮೈಸೂರು ಪ್ರವಾಸಿ ತಾಣಗಳ ಪ್ಯಾಕೇಜ್ ಇದ್ದಂತೆ. ಇಲ್ಲಿಗೆ ಬಂದರೆ ವೈವಿಧ್ಯಮಯ ಅನುಭವ ಆಗುತ್ತದೆ' ಎಂಬುದು ಅವರ ಅಭಿಮತ.

ಮುಂದಿನ ಬಾರಿ ರಜೆ ಸಿಕ್ಕಾಗ ಕರ್ನಾಟಕದ ಬೇರೆ ಕಡೆಗಳಿಗೆ ಪ್ರವಾಸ ಕೈಗೊಳ್ಳುವ ಉದ್ದೇಶದಲ್ಲೂ ಅವರಿದ್ದಾರೆ.

ಆಹಾರದ ವಿಷಯಕ್ಕೆ ಬಂದರೆ, ಬರ್ಗರ್, ಚೀಸ್ ಹಾಗೂ ಆಲೂಗೆಡ್ಡೆಯಿಂದ ಮಾಡಿದ ಪದಾರ್ಥಗಳೆಂದರೆ ಒಗೇಲ್ ಅವರಿಗೆ ಬಲು ಇಷ್ಟ. ಅದೇ ರೀತಿ, ಮಸಾಲಾ ಚಿಕನ್, ಮಸಾಲಾ ಚೀಸ್ ಬಾಯಿ ಚಪ್ಪರಿಸಿ ತಿನ್ನುತ್ತಾರಂತೆ.

■ **ಎನ್. ನವೀನ್ ಕುಮಾರ್**